



ಅದಾಗಲೇ ನಾಲ್ಕೈದು ದಶಕಗಳ ಹಿಂದೆ ಲಿಂಗನಮಕ್ಕಿ ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಿ ಇತಿಹಾಸದ ಪುಟವನ್ನು ಸೇರಿದ ಹಿರೇಭಾಸ್ಕರ ಅಣೆಕಟ್ಟು ಇತ್ತೀಚಿನ ವರ್ಷಗಳಲ್ಲಿ ಪದೇ ಪದೇ ಸೊರಗಿಹೋಗುತ್ತಿರುವ ನೀರಿನಿಂದಾಗಿ, ಮೇಲೆದ್ದು ಪ್ರವಾಸಿಗರಿಗೆ ತನ್ನ ದರುಶನವನ್ನು ನೀಡತೊಡಗಿದೆ. ಈ ವರ್ಷವೂ ದಾಖಲೆ ಪ್ರಮಾಣದಲ್ಲಿ ನೀರಿನ ಮಟ್ಟ ಇಳಿದಿದ್ದರಿಂದ ತುಸು ಹೆಚ್ಚೇ ಎನ್ನಬಹುದಾದಷ್ಟು ಅಣೆಕಟ್ಟು ಮೆಲೆದ್ದು ನಿಂತಿತು.

ಹಿರೇಭಾಸ್ಕರ ಅಣೆಕಟ್ಟು ಶರಾವತಿ ಕಣಿವೆಯ ಮೊದಲ ಹಂತದ ಜಲವಿದ್ಯುತ್ ಉತ್ಪಾದನೆಯ ಪ್ರಯತ್ನವಾಗಿದ್ದು ಇದರ ಕಾಮಗಾರಿ 1939ರಲ್ಲಿ ಪ್ರಾರಂಭಗೊಂಡು 1949ರಲ್ಲಿ ಉದ್ಘಾಟನೆಯಾಯಿತು. ಇದು ಅಂದಿನ ಮೈಸೂರು ಸಂಸ್ಥಾನದ ಆಡಳಿತದಡಿ ನಿರ್ಮಾಣಗೊಂಡು ಅಂದಿನ ಕಾಲದ 'ಎಂಜನಿಯರಿಂಗ್ ಅದ್ಭುತ'ವೆಂದೇ ಖ್ಯಾತಿ ಹೊಂದಿತು. ಜೋಗದ ಮಹಾತ್ಮಾ ಗಾಂಧಿ ವಿದ್ಯುತ್ ಉತ್ಪಾದನಾ ಕೇಂದ್ರದಲ್ಲಿ 120 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವಲ್ಲಿ ಇದು ನೆರವಾಯಿತು. ಆದರೆ 1965ರಲ್ಲಿ ನಿರ್ಮಾಣಗೊಂಡ ಶರಾವತಿಯ ಎರಡನೇ ಹಂತದ ಜಲವಿದ್ಯುತ್ ಯೋಜನೆಯಾದ ಲಿಂಗಮಕ್ಕಿ ಅಣೆಕಟ್ಟಿನ ಭಾರೀ ಪ್ರಮಾಣದ ಹಿನ್ನೀರಿನಲ್ಲಿ ಇದು ಜಲಸಮಾಧಿಯಾಗಿ ಹೋಯಿತು.

ನಂತರ ಅನೇಕ ವರ್ಷಗಳ ಕಾಲ ಉತ್ತಮ ಮಳೆಯಾಗಿ, ಲಿಂಗನಮಕ್ಕಿಯ ನೀರಿನ ಮಟ್ಟ ಹೆಚ್ಚಿನ ಪ್ರಮಾಣದಲ್ಲಿ ಇಳಿಯದೆ ಹೋದುದರಿಂದ ಈ ಅಣೆಕಟ್ಟು ನೀರೊಳಗೇ ಇತ್ತು. ಇದರ ಇರುವಿಕೆ ಹಳಬರ ಬಾಯಲ್ಲಿ ಕೇವಲ ಒಂದು ದಂತಕಥೆಯಾಗಿ ಮಾತ್ರ ಹರಿದಾಡಿಕೊಂಡಿತ್ತು. ವರ್ಷ ಕಳೆದಂತೆ ಪರಿಸರದ ಸಮತೋಲನ ಏರುಪೇರಾಗಿ ಮಳೆ ಕಡಿಮೆಯಾಗಿ ವಿದ್ಯುತ್ ಬೇಡಿಕೆಯೂ ಹೆಚ್ಚಾಗಿ ತುಂಬಿ ತುಳುಕುತ್ತಿದ್ದ ಲಿಂಗನಮಕ್ಕಿ ಬರಿದಾಗತೊಡಗಿತು. ಹೀಗಾಗಿ ಕಳೆದ ಕೆಲವು ವರ್ಷಗಳಿಂದ ದಂತಕಥೆ ಮಾತ್ರವೇ ಆಗಿದ್ದ ಹಿರೇಭಾಸ್ಕರ ಅಣೆಕಟ್ಟನ್ನು ಇಂದಿನ ಪೀಳಿಗೆಯವರೂ ಪ್ರತ್ಯಕ್ಷ ನೋಡುವಂತಾಯಿತು.

ಈ ಅಣೆಕಟ್ಟಿನ ವೈಶಿಷ್ಟ್ಯವೆಂದರೆ ಇದರ ಒಳಭಾಗದಲ್ಲಿರುವ ಹನ್ನೊಂದು 'ಸೈಫನ್' ಗೋಪುರಗಳು. ಇದೊಂದು ಅತಿ ಅಪರೂಪದ ಅಣೆಕಟ್ಟಿನ ವಿನ್ಯಾಸವಾಗಿದೆ. ಪ್ರತಿ ಸೈಫನ್ 58 ಅಡಿ ಎತ್ತರವಾಗಿದ್ದು 18 ಅಡಿ ವ್ಯಾಸವನ್ನು ಹೊಂದಿದೆ. ಈ ಅಣೆಕಟ್ಟಿನ ನೀರು ಗರಿಷ್ಠಮಟ್ಟ ತಲುಪಿದ ನಂತರ ಹೆಚ್ಚಾದ ನೀರು ಹೊರಹೋಗುವಂತಹ ವ್ಯವಸ್ಥೆಯನ್ನು ಈ ಸೈಫನ್‌ಗಳು ಮಾಡುತ್ತಿದ್ದವೆಂದು ಹೇಳಲಾಗುತ್ತಿದೆ.

ಈ ಗೋಪುರಗಳ ಮೇಲ್ಭಾಗದಲ್ಲಿ ಚೌಕಾಕಾರದ ಕಿಂಡಿಗಳಿವೆ. ಇವು ಹೆಚ್ಚಾದ ನೀರನ್ನು ಸೆಳೆದು ಹೊರದಬ್ಬುತ್ತಿದ್ದವು. ಸೈಫನ್ ಗೋಪುರಗಳು ಒಂದನ್ನೊಂದು ಸಂಪರ್ಕಿಸಲು ಇವುಗಳ ಮೇಲ್ಭಾಗದಲ್ಲಿ ಸೋಪಾನಗಳ ವ್ಯವಸ್ಥೆಯನ್ನೂ ಮಾಡಲಾಗಿದೆ. ವೃತ್ತಾಕಾರವಾಗಿ ಸೈಫನ್‌ನ ಕೆಳಭಾಗದಲ್ಲಿ ನಿರ್ಮಾಣಗೊಂಡ ಕಂಭಗಳು ಇದಕ್ಕೆ ಹೆಚ್ಚಿನ ಭದ್ರತೆಯನ್ನೂ ಒದಗಿಸಿವೆ. ಸೈಫನ್‌ಗಳಿಗೆ ಹೊಂದಿಕೊಂಡು ಮುಂಭಾಗದಲ್ಲಿ ಅಣೆಕಟ್ಟೆಯ ಮುಖ್ಯ ಕಟ್ಟಡವಿದ್ದು ಇದರ ಮೇಲೆ ಅಂದಿನ ದಿನಗಳಲ್ಲಿ ವಾಹನ ಸಂಚಾರಕ್ಕೂ ಅನುವು ಮಾಡಿಕೊಡಲಾಗಿತ್ತು.

ಇಷ್ಟು ವರ್ಷಗಳ ಕಾಲ ನೀರಲ್ಲಿ ಮುಳಗಿದ್ದರೂ ಸ್ವಲ್ಪವೂ ಮುಕ್ಕಾಗದೆ ಗಟ್ಟಿಮುಟ್ಟಾಗಿರುವ ಈ ಕಟ್ಟಡವನ್ನು ನೋಡಿದರೆ ಅಂದಿನ ಕಾಲದ ಕಾಮಗಾರಿಯ ಗುಣಮಟ್ಟ ಎಷ್ಟು ಉತ್ತಮವಾಗಿತ್ತು ಎನ್ನುವುದನ್ನು ಊಹಿಸಬಹುದು. ಕೇವಲ ಗಾರೆ ಹಾಗೂ ಹಾಸುದುಂಡಿ ಕಲ್ಲುಗಳಿಂದ ನಿರ್ಮಾಣಗೊಂಡ ಈ ಅಣೆಕಟ್ಟು ಇಂದಿಗೂ ಮನಸೂರೆಗೊಳ್ಳುವಂತಿದೆ.

ಮಾದರಿ ಎನಿಸಿದ ಈ ಅಣೆಕಟ್ಟೆಯ ವಿನ್ಯಾಸ ಮಾಡಿ ಕಟ್ಟಡದ ಉಸ್ತುವಾರಿ ವಹಿಸಿಕೊಂಡಿದ್ದವರು ಹಳೆ ಮೈಸೂರು ಭಾಗದ ಸಿವಿಲ್ ಎಂಜಿನಿಯರ್ ಗಣೇಶ್ ಅಯ್ಯರ್. ಈ ವಿನ್ಯಾಸದ ಪೇಟೆಂಟನ್ನೂ ಅವರು ಪಡೆದುಕೊಂಡಿದ್ದರು.

ಹಿರೇಭಾಸ್ಕರ ಅಣೆಕಟ್ಟು ಶಿವಮೊಗ್ಗ ಜಿಲ್ಲೆಯಲ್ಲಿದೆ. ಬೆಂಗಳೂರಿನಿಂದ 450 ಕಿ.ಮೀ. ದೂರದಲ್ಲಿದೆ. ಶಿವಮೊಗ್ಗ–ಸಾಗರ ಮಾರ್ಗದಲ್ಲಿ ಸಾಗಿ ಹೊಳೆಬಾಗಿಲನ್ನು ತಲುಪಬೇಕು. ಅಲ್ಲಿಂದ 5 ಕಿ.ಮೀ. ದೂರ ಕಚ್ಚಾರಸ್ತೆಯಲ್ಲಿ ಪ್ರಯಾಣಿಸಿದರೆ ಈ ಅಣೆಕಟ್ಟನ್ನು ನೋಡಬಹುದು. ಆದರೆ ಇದು ಶರಾವತಿ ಅಭಯಾರಣ್ಯ ಪ್ರದೇಶವಾಗಿರುವುದರಿಂದ ಅರಣ್ಯ ಇಲಾಖೆಯವರ ಅನುಮತಿ ಅಗತ್ಯವಾಗಿದೆ.